ಅಧ್ಯಕ್ಷರು.—ಇಂತಹ ವಿಚಾರಗಳನ್ನೆಲ್ಲಾ ನನ್ನ ಚೇಂಬರ್‌ನಲ್ಲಿ ಬಂದು ಚರ್ಚೆ ಮಾಡಿ ಎಂದು ನಾನು ಅನೇಕ ಸಲ ಹೇಳಿದ್ದೇನೆ. ಆದರೂ ಮಾನ್ಯ ಸದಸ್ಯರು ಇಲ್ಲಿ ಪ್ರಸ್ತಾಪ ಮಾಡುತ್ತಿರುವುದು ಸರಿಯಲ್ಲ.

Budget Estimates for 1974-75 Demands for Grants

(*Demand Nos.* 48, 40, 47) (*Debate continued*)

† ಶ್ರೀ ಕಾಗೋಡು ತಿಮ್ಮಪ್ಪ (ಸಾಗರ),—ಮಾನ್ಯ ಅಧ್ಯಕ್ಷರೇ, ಮಾನ್ಯ ಅರಣ್ಯ ಖಾತೆಯ ಮಂತ್ರಿಗಳು ಮಂಡಿಸಿರತಕ್ಕಂಥ ಬೇಡಿಕೆಗಳನ್ನು ನಾನು ವಿರೋಧ ಮಾಡುತ್ತಾ ಎರಡು ಮಾತನ್ನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ನಮ್ಮ ಅರಣ್ಯ ಸಚಿವರು ತಮ್ಮ ಇಲಾಖೆಗೆ ಸಂಬಂಧ ಪಟ್ಟಂತೆ ವರದಿಯೊಂದನ್ನು ಒಪ್ಪಿಸಿದ್ದಾರೆ. ವರದಿಯಲ್ಲಿ ಈ ರೀತಿ ಹೇಳಿದ್ದಾರೆ: Out of the total geographical area of 74.122 sq.miles, the forest area is 11.275 sq. miles which is 1 .3 per cent of the land area as against 23 per cent of All India average and 33 1/3 per cent prescribed in the National Forest policy ಎಂದು. ಆಂದರೆ ನಮ್ಮಲ್ಲಿ ಹಾಲಿ 15.3 ರಷ್ಟು ಮಾತ್ರ ಅರಣ್ಯ ಪ್ರದೇಶವಿದೆ ಎಂದು ಹೇಳಿದ್ದಾರೆ. ಮುಂದೆ Evergreen and semi-evergreen forest 18.8 and Moist deciduous Forests 23. 3 ಇದೆ ಎಂದು ಹೇಳಿದ್ದಾರೆ ಇದು ನಮ್ಮ ಮಲೆನಾಡಿನ ಅಂಚಿನಲ್ಲಿ ಬರುತ್ತದೆ. ಆಂದರೆ ಹೆಚ್ಚು ಕಡಿಮೆ ಪಶ್ಚಿಮ ಘಟ್ಟದ ಅಂಚಿನಲ್ಲಿ ಬರುತ್ತದೆ. ಇಂದು ನಾವು ಮಲೆನಾಡಿನಲ್ಲಿರುವ ಅರಣ್ಯವನ್ನು ಮತ್ತು ರಾಜ್ಯದ ಇತರೇ ಪ್ರದೇಶದಲ್ಲಿರುವ ಅರಣ್ಯಕ್ಕೆ ಹೋಲಿಕೆ ಮಾಡಿ ನೋಡಿದರೆ, ನಮ್ಮ ಮಲೆನಾಡಿನಲ್ಲಿ ಶೇಕಡ 33ಕಂತ ಜಾಸ್ತಿ ಅರಣ್ಯ ಪ್ರದೇಶವಿದೆ ಎಂದು ಹೇಳಬಹುದು. ಮುಖ್ಯವಾಗಿ ಶಿವಮೊಗ್ಗ, ಉತ್ತರಕನ್ನಡ ಜಿಲ್ಲೆ ಮತ್ತು ಇನ್ನೂ ಕೆಲವು ಮಲೆನಾಡಿನ ಪ್ರದೇಶಗಳಲ್ಲಿರುವ ಅರಣ್ಯವನ್ನು ಲೆಕ್ಕಕ್ಕೆ ತೆಗೆದು ಕೊಂಡರೆ ಶೇಕಡ 33ಕ್ಕಿಂತ ಜಾಸ್ತಿ ಅರಣ್ಯ ಪ್ರದೇಶವಿದೆ ಎಂಬುದು ಎಲ್ಲರಿಗೂ ಗೊತ್ತಾಗುತ್ತದೆ. ಈ ಮಾತನ್ನು ಏತಕ್ಕೆ ಹೇಳುತ್ತೇನೆಂದರೆ, ಇಂದು ಸರ್ಕಾರಕ್ಕೆ ಅರಣ್ಯಬಾಬಿನಿಂದ ಏನು ಆದಾಯ ಬರುತ್ತಿದೆ, ಆದರಲ್ಲಿ ಹೆಚ್ಚಿನ ಭಾಗ ಮಲೆನಾಡು ಪ್ರದೇಶಗಳಿಂದ ಬರುತ್ತಿದೆ ಎಂದು ಹೇಳಬಹುದು. ಇಂದು ಸರ್ಕಾರದವರು ಬಯಲು ಪ್ರದೇಶಗಳಲ್ಲಿ ಅರಣ್ಯವನ್ನು ಬೆಳೆಸುವುದಕ್ಕೆ ಪ್ರಯತ್ನ ಮಾಡುತ್ತಿದ್ದರೂ ಸಹ ಮಲೆನಾಡಿನಲ್ಲಿರತಕ್ಕಂಥ ಅರಣ್ಯದಷ್ಟು ದಟ್ಟವಾಗಿ ಬೆಳೆಸುವುದಕ್ಕೆ ಸಾಧ್ಯವಿಲ್ಲ. ಆದಕಾರಣ ನಿಮ್ಮ ಎಲ್ಲ ಅಭಿವೃದ್ಧಿ ಕಾರ್ಯಕ್ರಮಗಳು ಕೂಡ ಮಲೆನಾಡು ಪ್ರದೇಶಗಳಲ್ಲಿ ಹೆಚ್ಚಾಗಿ ಆಗಬೇಕಾಗಿದೆ. ಆದರೆ ವಿವಿಧ ರೀತಿಯಲ್ಲಿ ಮಲೆನಾಡಿನಲ್ಲಿ ಅರಣ್ಯಸಂಪತ್ತನ್ನು ವೃದ್ಧಿ ಮಾಡುವ ಬಗ್ಗೆ ವಿವಿಧ ಯೋಜನೆಗಳನ್ನು ರೂಪಿಸುವುದಕ್ಕೆ ನಿಮಗೆ ಸಾಧ್ಯವಾಗಿದೆಯೋ ಅಥವಾ ಇಲ್ಲವೋ ಎಂಬುದು ನನಗೆ ಗೊತ್ತಿಲ್ಲ. ಆಗುಂಬೆ, ಜೋಗ, ಸುಬ್ರಮಣ್ಯ ಮುಂತಾದ ಪ್ರದೇಶಗಳಲ್ಲಿ ಈ ಮೊದಲು ದಟ್ಟವಾದ ಅರಣ್ಯವಿತ್ತು. ಅಲ್ಲಿಗೆ ಹಗಲುಹೊತ್ತು ಹೋದರೆ ಕತ್ತಲು ಇದ್ದಂತೆ ಕಾಣುತ್ತಿತ್ತು. ಅಂದು ದೊಡ್ಡ ದೊಡ್ಡ ಹೆಮ್ಮರಗಳನ್ನು ನೋಡುವುದಕ್ಕೆ ಸಾಧ್ಯವಿತ್ತು. ಆದರೆ ಇಂದು ಅಂತಹ ಮರಗಳನ್ನು ನಾವು ಕಾಣುವುದಕ್ಕೆ ಸಾಧ್ಯವಾಗುತ್ತಿಲ್ಲ. ಕಾರಣ ಬಲ್ಲವೂ ನಶಿಸಿ ಹೋಗುತ್ತಿದೆ. ಪ್ರಕೃತಿದತ್ತವಾದ ಮತ್ತು ಸೌಂದರ್ಯದಿಂದ ಕೂಡಿದ ಅರಣ್ಯವನ್ನು ನಾವು ಮೊದಲು ಪಶ್ಚಿಮಘಟ್ಟದಲ್ಲಿ ಕಾಣುತ್ತಿದ್ದೆವು, ಆದರೆ ಹಿಂದೆ ನೋಡಿದವರು ಇಂದು ಹೋಗಿ ನೋಡಿದರೆ ಕಣ್ಣೀರು ಹರಿಸಬೇಕಾಗುತ್ತದೆ. ಹಿಂದೆ ಇದ್ದಂಥ ಅಲ್ಲಿಯ ಕಾಡನ್ನು ಕುರಿತು ಕವಿಗಳು ಹಾಡಿದರು. ಶಿವಪ್ಪನಾಯಕನ ಕಾಲದಲ್ಲಿ ಪಾಶ್ಚಿಮಾತ್ಯ ದೇಶಗಳಿಂದ ಬಂದಂಥ ಯಾತ್ರಿಕರು ಅಲ್ಲಿಯ ದಟ್ಟ ಕಾಡನ್ನು ನೋಡಿ ನಾನಾ ರೀತಿಯಿಂದ ವರ್ಣನೆ ಮಾಡಿದರು. ಸುತ್ತಲೂ ಕಾಡು ಪ್ರದೇಶ ಇದ್ದು ಮಧ್ಯ ಮಧ್ಯದಲ್ಲಿ ಭತ್ತದ ಗದ್ದೆಗಳು ಇದ್ದವು. ಅದನ್ನೆಲ್ಲಾ ಹಿಂದೆ ನೋಡಿದವರು ಏನಾದರೂ ಇಂದು ಮರಳಿ ಹೋಗಿ ನೋಡಿದರೆ ಆಂದಿನ ಮಲೆನಾಡು ಎಲ್ಲಿ ಹೋಯಿತು, ಬೇರೆ ಕಡೆಗೆ ಹೋಯಿತೇ, ಮಾಯವಾಯಿತೇ ಅಥವಾ ತಾವು ನೋಡಿದ್ದು ಕನಸೇ ಎಂಬತಕ್ಕಂಥ ಸಂಶಯ ಬರುತ್ತದೆ. ಈ ಒಂದು ಸಂಶಯವನ್ನು ಹೋಗರಾಡಿಸಲು ಮೊದಲಿದ್ದ ರೀತಿಯಲ್ಲಿಯೇ ಅರಣ್ಯವನ್ನು ಬೆಳೆಸಲು ಸರ್ಕಾರದವರು ವಿಶೇಷವಾದ ಕಾರ್ಯಕ್ರಮವನ್ನು ರೂಪಿಸಿಕೊಳ್ಳಬೇಕು. ಪಶ್ಚಿಮಘಟ್ಟದ ಯೋಜನೆಯ ಕಾರ್ಯಕ್ರಮದ ಅಂಗವಾಗಿ ಈ ಬಗ್ಗೆ ಒಂದು ಯೋಜನೆ ರೂಪುಗೊಳ್ಳು

(ಶ್ರೀ ಕಾಗೋಡು ತಿಮ್ಮಪ್ಪ)

ತಿದೆ ಎಂದು ತಾವು ಇಲ್ಲಿ ಹೇಳಿದ್ದೀರಿ. ಮತ್ತು ಅದಕ್ಕೆ ವಿಶೇಷವಾದ ಹಣವನ್ನು ತೆಗೆದಿಡ ಲಾಗಿದೆ ಎಂದು ಸಹ ಹೇಳಿದ್ದೀರಿ. ಆದರೆ ಈ ಯೋಜನೆಗಳನ್ನು ಮಾಡಬೇಕಾದರೆ ಪೂರ್ವ ಭಾವಿ ಸಿದ್ಧತೆ ಇಲ್ಲದೇ ಹೋದರೆ ಕಷ್ಟವಾಗುತ್ತದೆ. ಆದಕಾರಣ ಮೊದಲು ಪೂರ್ವಭಾವಿ ಸಿದ್ಧತೆ ಮಾಡಿಕೊಳ್ಳಬೇಕು. ಇಂದು ಅರಣ್ಯದಲ್ಲಿರುವ ದೊಡ್ಡ ದೊಡ್ಡ ಹೆಮ್ಮರಗಳೆಲ್ಲಾ ನಶಿಸಿ ಹೋಗುತ್ತಿ ರುವುದಕ್ಕೆ ಕಾರಣ, ಅವುಗಳನ್ನು ಕಡಿಯುವುದಕ್ಕೆ ದೊಡ್ಡ ದೊಡ್ಡ ಕಂಪನಿಯವರಿಗೆ ಅವಕಾಶ ಕೊಟ್ಟಿರುವುದು. ಕೆಲವು ಮ್ಯಾಚ್ ಫ್ಯಾಕ್ಟರಿಯವರಿಗೆ ಕಾಡಿನಲ್ಲಿರುವ ಮೆದು ಮರಗಳನ್ನು ಕಡಿ ಯಲು ಅವಕಾಶ ಕೊಟ್ಟಿದ್ದೀರಿ. ಅದರಂತೆ ಅವರು ಮರಗಳನ್ನು ಕತ್ತರಿಸುತ್ತಿದ್ದಾರೆ. ಹಿಂದೆ ಮಾಡಿ ಕೊಂಡಂತಹ ಒಂದು ಒಪ್ಪಂದದ ಪ್ರಕಾರ ಇವೇ ರೀತಿ ಮರಗಳನ್ನು ಕತ್ತರಿಸುವುದಕ್ಕೆ ಅವರಿಗೆ ಅವ ಕಾಶ ಕೊಡುತ್ತಾ ಹೋದರೆ ಮುಂದೆ ಅಲ್ಲಿ ಮರಗಳೇ ಇಲ್ಲದಂತೆ ಆಗುತ್ತದೆ. ಒಂದು ಮರವನ್ನು ಬೆಳೆಯಬೇಕಾದರೆ ನೂರು ವರ್ಷಗಳು ಬೇಕಾಗುತ್ತದೆ. ಆದಕಾರಣ ಮರಗಳನ್ನು ಕತ್ತರಿಸುವ ವಿಚಾರದಲ್ಲಿ ಒಂದು ಸೀಲಿಂಗ್ ಇದಬೇಕಾಗುತ್ತದೆ. ಇಂದು ಇಂಡಿಯನ್ ಪ್ಲೈವುಡ್ ಕಂಪನಿಯ ವ ರಿಗೆ ಪೇಪರ್ ಮಿಲ್‌ನವರಿಗೆ, ಕಮರ್ಷಿಯಲ್ ಯೂನಿಯನ್ ಅವರಿಗೆ ಮತ್ತು ಇನ್ನೂ ಅನೇಕ ಮ್ಯಾಚ್ ಫ್ಯಾಕ್ಟರಿಯವರಿಗೆ ದೊಡ್ಡ ಪ್ರಮಾಣದಲ್ಲಿ ಮೆದು ಮರಗಳನ್ನು ಕಡಿಯಲು ಅವಕಾಶ ಕೊಟ್ಟಿದ್ದೀರಿ. ಇದರಿಂದ ಪ್ರತಿವರ್ಷ 1, 12, 500 ಕ್ಯೂಬಿಕ್ ಫೀಟ್‌ನಷ್ಟು ಮರ ಖರ್ಚಾಗು ತ್ತಿದೆ. ಆದರೆ ಇಷ್ಟೇ ಪ್ರಮಾಣದಲ್ಲಿ ಮರಗಳು ಬೆಳೆಯಲಾಗುತ್ತಿದೆಯೇ ಎಂಬ ಸಂಶಯ ಬರುತ್ತಿದೆ. ಎಷ್ಟು ಪ್ರಮಾಣದಲ್ಲಿ ಮರ ಕಡಿಯಲಾಗುತ್ತಿದೆ ಮತ್ತು ಎಷ್ಟು ಪ್ರಮಾಣದಲ್ಲಿ ಹೊಸದಾಗಿ ಬೆಳೆಸಲಾಗುತ್ತಿದೆ ಎಂಬ ಬಗ್ಗೆ ನರಕಾರ ಲೆಕ್ಕ ಕೊಡಬೇಕು. ಏಕೆಂದರೆ ಈ ಕಂಪನಿಯ ವರು ದೊಡ್ಡ ಪ್ರಮಾಣದಲ್ಲಿ ಮರಗಳನ್ನು ಕತ್ತರಿಸುತ್ತಿದ್ದಾರೆ. ಒಂದು ದೊಡ್ಡ ಮರವನ್ನು ಕತ್ತರಿ ಸಿದರೆ ಒಂದು ಎಕರೆ ಪ್ರದೇಶದಷ್ಟು ಅರಣ್ಯ ಲುಕ್ಷಾನಾಗುವುದನ್ನು ನಾವು ಕಾಣುತ್ತಿದ್ದೇವೆ.

ಆದ್ದರಿಂದ ಇಂಥಾ ದೊಡ್ಡ ಕಂಪೆನಿಯವರು ಮರಗಳನ್ನು ತೆಗೆದುಕೊಳ್ಳುವಂಥಾ ಕಾಲದಲ್ಲಿ ಮೈಜಾಸ್ಟಿಕ ಕ್ರಮಗಳನ್ನು ಅನುಸರಿಸಬೇಕು. ದಟ್ಟವಾದ ಅರಣ್ಯ ಹಾಳಾಗಬಾರದು. ಲಕ್ಷಾನು ಆಗದಂತೆ ಪ್ಲೈವುಡ್ ಕಂಪೆನಿಗೆ ಮರವನ್ನು ಕೊಡಬೇಕು. ಅವರಿಗೆ ಮೆದು ಮರವನ್ನು ಕೊಡುವಕ್ಕ ಕಾಲದಲ್ಲಿ ಅವರ ಅವಶ್ಯಕತೆಗೆ ತಕ್ಕಂತೆ ಕೊಡಬೇಕು. ನಾಗರೀಕರಿಗೆ ಪ್ಲೈವುಡ್ ಉಪಯೋಗಿನ ಬೇಕು ಎನ್ನುವ ಆಶೆ ಇದೆ. ಜನಗಳಿಗೆ ಸಾಕಷ್ಟು ಬೇಡಿಕೆಯೂ ಇದೆ. ಆದರೆ ಬೇಡಿಕೆ ಇದ್ದ ಪ್ರಮಾಣದಲ್ಲಿ ಮರ ಇದೆಯೇ ಎಂಬುದನ್ನು ಯೋಚನೆ ಮಾಡಬೇಕು. ಈ ದೃಷ್ಟಿಯಿಂದ ಈ ಯೋಜನೆಯನ್ನು ಪುನರ್‌ಪರಿಶೀಲನೆ ಮಾಡಬೇಕು. ಈಗ ಆ ಕಾರ್ಖಾನೆಯಲ್ಲಿ ಎಷ್ಟು ಜನ ನೌಕರರು ಇದ್ದಾರೆ, ಅದರಲ್ಲಿ ಎಷ್ಟು ಬಂಡವಾಳವನ್ನು ತೊಡಗಿಸಿದ್ದಾರೆ, ಅದಕ್ಕಿಂತ ಹೆಚ್ಚು ಬಂಡವಾಳವನ್ನು ಅದರಲ್ಲಿ ತೊಡಗಿಸಿ ಆ ಕಾರ್ಖಾನೆಯನ್ನು ದೊಡ ದು ಮಾಡುವುದಕ್ಕೆ ಅವಕಾಶ ವನ್ನು ಕೊಡಬಾರದು. ತಾಳಗುಪ್ಪ, ದಾಂಡೇಲಿಗಳಲ್ಲಿರತಕ್ಕ ಕಾರ್ಖಾನೆಗಳಿಗೆ ಈ ರೀತಿ ಮರವನ್ನು ಕೊಡುತ್ತಾ ಹೋದರೆ ಇನ್ನು 20 ವರ್ಷಗಳಲ್ಲಿ ಇರತಕ್ಕ ಕಾಡಿನ ಬಂಡವಾಳವೆಲ್ಲವೂ ಹೊರಟು ಹೋಗುತ್ತದೆ. ಹೊಸ ಹೊಸ ಕಾರ್ಖಾನೆಗಳನ್ನು ಮಾಡುವುದಕ್ಕೆ ಮರಗಳನ್ನು ಕೊಡುತ್ತಾ ಹೋದರೆ ಕಷ್ಟವಾಗುತ್ತದೆ. ಮಲೆನಾಡು ಪ್ರದೇಶದಲ್ಲಿ ಮರವನ್ನು ಆಧರಿಸಿ ಕೈಗಾರಿಕೆಗಳನ್ನು ಮಾಡಿರುವುದು ಕಡಿಮೆ. ಇವೊತ್ತು ಸಣ್ಣಪುಟ್ಟ ಕೈಗಾರಿಕೆಗಳನ್ನು ಬೆಳೆಸುವುದಕ್ಕೆ ಅವಕಾಶ ಇಲ್ಲ. ಆದ್ದರಿಂದ ದೊಡ್ಡ ದೊಡ್ಡ ಕೈಗಾರಿಕೆಗಳಿಗೆ ಮರವನ್ನು ಕೊಡುವುದನ್ನು ಹಂತ ಹಂತವಾಗಿ ಕಡಿಮೆ ಮಾಡುತ್ತಾ ಬರಬೇಕು. ಅವರು ಕೈಗಾರಿಕೆಗಳನ್ನು ಬೆಳೆಸುವುದಕ್ಕೆ ಅವಕಾಶವನ್ನು ಕೊಡಬೇಡಿ. ವಿಂಕೋ ಫ್ಯಾಕ್ಟರಿಗೆ ಮತ್ತು ಇತರೆ ಹೊರಗಡೆಯವರಿಗೆ ಸರ್ಕಾರದವರು ಮರವನ್ನು ಕೊಡುತ್ತಿ ದ್ದಾರೆ. ಅದನ್ನು ನಿಲ್ಲಿಸಿದರೆ ಅವರ ಕರಾರು ಮುರಿದಂತಾಗುತ್ತದೆ. ಅವರು ಕೋರ್ಟಿಗೆ ಹೋಗುತ್ತಾರೆ ಎಂದು ಹೇಳುತ್ತಾರೆ. ಹೀಗೆ ಮುಂದೆ ತಳ್ಳುತ್ತಾ ಅವರಿಗೆ ಮರವನ್ನು ಕೊಡುತ್ತಾ ಹೋದರೆ ಅದು ಕಷ್ಟವಾಗುತ್ತದೆ. ಅವರು ನಮಗೆ ಬೇಕಾದಂತಹ ಬೆಂಕಿ ಪೊಟ್ಟಣವನ್ನು ತಯಾರು ಮಾಡಿಕೊಡುತ್ತಾರೆ ಎಂದು ಸರ್ಕಾರದವರು ತಿಳಿದುಕೊಂಡಿದ್ದರೆ ಅಷ್ಟೇ ಪ್ರಮಾಣದಲ್ಲಿ ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ಮಾಡಿದರೂ ನಮಗೆ ಬೇಕಾದಂತಹ ಬೆಂಕಿ ಪೊಟ್ಟಣವನ್ನು ಒದಗಿಸುವುದಕ್ಕೆ ಸಾಧ್ಯವಾಗುತ್ತದೆ. ಅದ್ದರಿಂದ ಆ ಫ್ಯಾಕ್ಟರಿಗೆ ಮೆದು ಮರವನ್ನು ಕೊಡುವುದನ್ನು ನಿಲ್ಲಿಸಬಹುದು. ಆ ಕಾರ್ಖಾನೆಯವರು ಮರವನ್ನು ಕಡಿಯುವುದಕ್ಕೆ ಬಂದಾಗ ಸಂಬಂಧಪಟ್ಟ ಅಧಿಕಾರಿಗಳು ಈ ಮರವನ್ನು ಕಡಿಯಬೇಡಿ, ಇದು ಚೆನ್ನಾಗಿಲ್ಲ, ಕೆಟ್ಟು ಹಾಗಿದೆ, ಇದು ಹೀಗಿದೆ ಎಂದು ಹೇಳಿ ಬಿಡಿಸುತ್ತಾ ಹೋದರೆ ಅವರು ಒಂದು ಸಾವಿರ ಅಡಿ ಕತ್ತರಿಸುವುದನ್ನು 500 ಅಡಿಗೆ

ಇಳಿಸುವುದಕ್ಕೆ ಬರುತ್ತದೆ. ಅಂಥಾ ಒಂದು ಕಾರ್ಯಕ್ರಮವನ್ನು ಹಾಕಿಕೊಂಡು ಡಿ.ಎಫ್.ಒ, ಮತ್ತು ಕನ್ಸರ್‌ವೇಟರ್ ಆಫ್ ಫಾರೆಸ್ಟ್ ಅವರು ಒಂದು ಕಲ್ಪನೆಯನ್ನು ಇಟ್ಟುಕೊಂಡು ಆ ಕ್ಷೇತ್ರದಲ್ಲಿ ಸ್ಥಳೀಯವಾಗಿ ಕೆಲಸ ಮಾಡತಕ್ಕ ಅಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟು ಕೆಲಸ ಮಾಡಿ ಆ ಕಾರ್ಖಾನೆಯವರು ಒಂದೊಂದು ಮರವನ್ನು ಕಡಿಯುವುದನ್ನು ಬಿಟ್ಟು ಹೋಗತಕ್ಕಂಥಾ ಒಂದು ವಾತಾವರಣವನ್ನು ನಿರ್ಮಾಣ ಮಾಡಬೇಕಾಗುತ್ತದೆ. ಇದನ್ನು ರಾಜ್ಯದ ಹಿತದೃಷ್ಟಿಯಿಂದ ಮಾಡಬೇಕಾಗುತ್ತದೆ. ಹಳಿಯಾಳ, ಹಾಗೂ ಉತ್ತರ ಕನ್ನಡ ಜಿಲ್ಲೆಯ ಇನ್ನೂ ಕೆಲವು ಭಾಗದಲ್ಲಿ ಮರವನ್ನು ಆಧರಿಸಿ ಕೆಲವು ಕಾರ್ಖಾನೆಗಳನ್ನು ಮಾಡುತ್ತೇವೆ ಎಂದು ಸರ್ಕಾರದವರು ಹೇಳಿಕೆಯನ್ನು ಕೊಟ್ಟಿದ್ದಾರೆ. ಆ ರೀತಿ ಮಾಡುವುದಕ್ಕೆ ಅಲ್ಲಿ ಯಾವ ಮರ ಸಿಕ್ಕುತ್ತದೆ ? ಅಲ್ಲಿ ಸಿಕ್ಕತಕ್ಕಂಥಾ ಮರ ಯಾವುದು ಇದೆ ? ಆ ಡಿವಿಜನ್‌ನಲ್ಲಿ ನೀಲಗಿರಿ ಮರವನ್ನು ಕಡಿದು ಹಾಕುತ್ತಿದ್ದಾರೆ. ಅಲ್ಲಿರತಕ್ಕ ಬೇರೆ ಮರಗಳನ್ನು ಕಡಿಯುತ್ತಿದ್ದಾರೆ. ಹೀಗಿರುವಾಗ ಮರವನ್ನು ಆಧರಿಸಿ ಕಾರ್ಖಾನೆಯನ್ನು ಮಾಡುತ್ತೇವೆ ಎಂದರೆ ಮರವನ್ನು ಎಲ್ಲಿಂದ ತರುತ್ತಾರೆ ? ಸಾವಿರಾರು ವರ್ಷಗಳಿಂದ ಇದ್ದಂತಹ ಕಾಡನ್ನು ಕಡಿಯುತ್ತಿದ್ದಾರೆ. ಹೊಸ ಕಾಡು ಯಾವಾಗ ಬರುತ್ತದೆ ಎಂಬುದು ಗೊತ್ತಾಗುವುದಿಲ್ಲ. ಈಗ ಹತ್ತು ವರ್ಷಗಳ ಅವಧಿಯಲ್ಲಿ ಹಿಂದೆ ಇದ್ದಂತಹ ಕಾಡನ್ನೆಲ್ಲಾ ಕಡಿದು ಹಾಕಿದ್ದಾರೆ. ಈ ಹತ್ತು ವರ್ಷಗಳ ಅವಧಿಯಲ್ಲಿ ಯಾವ ಪ್ರಮಾಣದಲ್ಲಿ ಕಾಡನ್ನು ಕಡಿದಿದ್ದಾರೆಯೋ ಆ ಪ್ರಮಾಣದಲ್ಲಿ ಕಾಡನ್ನು ಬೆಳೆಸಿದ್ದಾರೆಯೇ ಎಂದು ನಾನು ಕೇಳುತ್ತೇನೆ. ಇರುವ ಕಾಡನ್ನು ಕಡಿಯುವುದಕ್ಕಿಂತ ಕಾಡು ಇಲ್ಲದೇ ಇರುವ ಪ್ರದೇಶದಲ್ಲಿ, ಮರೆನಾಡು ಪ್ರದೇಶದಲ್ಲಿ ವ್ಯವಸಾಯ ಮಾಡದೆ ಬಿಟ್ಟಿರುವ ಜಾಗದಲ್ಲಿ ಕಾಡನ್ನು ಬೆಳೆಸುವುದಕ್ಕೆ ಪ್ರಯತ್ನ ಮಾಡಬೇಕು. ಪಶ್ಚಿಮಘಟ್ಟದ ಉದ್ದಕ್ಕೂ ಮಳೆಯ ಕೊರತೆಯಿರುವುದಿಲ್ಲ ಆದ್ದರಿಂದ ಆ ಪ್ರದೇಶದಲ್ಲಿ ವೈಜ್ಞಾನಿಕ ಕ್ರಮದಿಂದ ಕಾಡನ್ನು ಬೆಳೆಸುವುದಕ್ಕೆ ಒಂದು ಯೋಜನೆಯನ್ನು ಮಾಡಿದರೆ ಕಾಡು ಇಲ್ಲದ ಪ್ರದೇಶದಲ್ಲಿ ಲಕ್ಷಾಂತರ ಎಕರೆ ಪ್ರದೇಶದಲ್ಲಿ ಹೊಸ ಕಾರ್ಡನ್ನು ಬೆಳೆಸಬಹುದು. ಇದ್ದಂತಹ ಹೆಮ್ಮರಗಳನ್ನು ಕಡಿದು ಹಾಕಿದ್ದಾರೆ. ಇದ್ದಂತಹ ಕಾಡನ್ನು ಕಡಿದು ಹಾಕಿದ್ದಾರೆ. ಆದರೆ ಕಾಡು ಇಲ್ಲದೇ ಇರುವ ಕಡೆ ಕಾಡನ್ನು ಬೆಳೆಸುವುದಕ್ಕೆ ಹೋಗಿಲ್ಲ. ಹೊಸ ಕಾಡನ್ನು ಬೆಳೆಸಬೇಕಾದರೆ ಗೊಬ್ಬರ, ಸೊಪ್ಪು ಮುಂತಾದ ಏನು ಸಾರ ಬೇಕಾಗುತ್ತದೆಯೋ ಅದನ್ನು ಹಾಕಿ ಕಾಡು ಇಲ್ಲದೇ ಇರತಕ್ಕ ಪ್ರದೇಶದಲ್ಲಿ ಕಾಡನ್ನು ಬೆಳೆ ಬೇಕಾಗುತ್ತದೆ. ಈಗ ಯಾವ ಪ್ರಮಾಣದಲ್ಲಿ ಕಾಡನ್ನು ಕಡಿದು ಹಾಕಿದ್ದಾರೆಯೋ ಆ ಪ್ರಮಾಣದಲ್ಲಿ ಸಾರ್ವಜನಿಕ ಹಿತದೃಷ್ಟಿಯಿಂದ ಮಲೆನಾಡು ಪ್ರದೇಶದಲ್ಲಿ ಅರಣ್ಯವನ್ನು ಬೆಳೆಸುವುದಕ್ಕೆ ಒಂದು ಶಾಶ್ವತವಾದ ಕಾರ್ಯಕ್ರಮವನ್ನು ಸರ್ಕಾರದವರು ಹಾಕಿಕೊಳ್ಳಬೇಕು. ಈ ಬಗ್ಗೆ ಒಂದು ಅಧ್ಯಯನವನ್ನು ಮಾಡಬೇಕಾಗುತ್ತದೆ. ಪಶ್ಚಿಮಘಟ್ಟದ ಪದೇಶದಲ್ಲಿ ಮಲೆನಾಡು ಪ್ರದೇಶದಲ್ಲಿ ಅರಣ್ಯವನ್ನು ಬೆಳೆಸುವುದಕ್ಕೆ ಒಂದು ವಿಶೇಷ ಯೋಜನೆಯನ್ನು ಮಾಡಬೇಕು. ಪಶ್ಚಿಮಘಟ್ಟದ ಅಭಿವೃದ್ಧಿ ಯೋಜನೆಗೆ ಸಾಕಷ್ಟು ಹಣ ಸಿಕ್ಕಬೇಕಾದರೆ ಪೂರ್ವ ಸಿದ್ಧತೆ ಮಾಡಿಕೊಳ್ಳಬೇಕು. ಇದಕ್ಕೆ ಪ್ರತ್ಯೇಕವಾದ ಒಂದು ಯೋಜನೆಯನ್ನು ಸಿದ್ಧತೆ ಮಾಡುವುದಕ್ಕೆ ಪ್ರತಿ ಜಿಲ್ಲೆಯಲ್ಲಿಯೂ ಸಾರ್ವಜನಿಕರ ಅಭಿಪ್ರಾಯ, ಸ್ಥಳೀಯ ಸಂಸ್ಥೆಗಳ ಸಂಪರ್ಕವನ್ನು ಬೆಳೆಸಿಕೊಂಡು ಈ ಯೋಜನೆಯನ್ನು ಯಾವ ಕ್ಷೇತ್ರದಲ್ಲಿ ಮಾಡಬೇಕು, ಯಾವ ಕ್ಷೇತ್ರದಲ್ಲಿ ಅರಣ್ಯವನ್ನು ಬೆಳೆಸುವುದಕ್ಕೆ ಯೋಗ್ಯವಾಗಿದೆ ಎಂಬುದನ್ನು ಪರಿಶೀಲನೆ ಮಾಡಿ ಅಂಕಿ ಅಂಶಗಳನ್ನು ಸಂಗ್ರಹ ಮಾಡಿದ್ದಾರೆಯೋ ಇಲ್ಲವೋ ಗೊತ್ತಿಲ್ಲ. ಆದ್ದರಿಂದ ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಆಸಕ್ತಿವಹಿಸಿ ಪ್ರತಿ ಜಿಲ್ಲೆಯಲ್ಲಿಯೂ ಎಲ್ಲೆಲ್ಲಿ ಅರಣ್ಯವನ್ನು ಬೆಳೆಸುವುದಕ್ಕೆ ಅವಕಾಶ ಇದೆ ಎಂಬುದರ ಬಗ್ಗೆ ಒಂದು ಪಟ್ಟಿಯನ್ನು ಮಾಡಿದ್ದಿದರೆ ಅದು ಪರಿಪೂರ್ಣವಾಗುವದಿಲ್ಲ. ಈ ಯೋಜನೆಯಿಂದ ಸಾರ್ವಜನಿಕರಿಗೆ ಫಲ ಸಿಕ್ಕಬೇಕು. ಮಲೆನಾಡಿನಲ್ಲಿ ಪಶ್ಚಿಮ ಘಟ್ಟದಲ್ಲಿ ಅರಣ್ಯವನ್ನು ಬೆಳೆಸುವುದಕ್ಕೆ ಕೇಂದ್ರ ಸರ್ಕಾರದಿಂದ ಹೇರಳವಾದ ಹಣ ಸಿಕ್ಕುತ್ತದೆ. ಈ ಹಣವನ್ನು ಪಡೆಯಬೇಕಾದರೆ ಪೂರ್ವ ಸಿದ್ಧತೆಗಳನ್ನು ಈಗಲೇ ಮಾಡಿಕೊಳ್ಳಬೇಕು. ಅಭಿವೃದ್ಧಿ ಮಂಡಲಗಳಿಗೆ ಸಂಬಂಧಪಟ್ಟ ಜನರನ್ನು ಸೇರಿಸಿಕೊಂಡು ಯಾವ ಯಾವ ಊರಿನಲ್ಲಿ ಎಲ್ಲೆಲ್ಲಿ ಅರಣ್ಯವನ್ನು ಬೆಳೆಸಬೇಕು ಎನ್ನುವ ಬಗೆ ಅವರ ಒಂದು ಅಭಿಪ್ರಾಯವನ್ನೂ ಪಡೆದುಕೊಂಡು ಪ್ಲಾಂಟೇಷನ್ ಬೆಳೆಸುವುದಕ್ಕೆ ವಿಲೇಜನ್ನು ಒಂದು ಯೂನಿಟ್ಟಾಗಿ ತೆಗೆದು ಕೊಳ್ಳಬೇಕು. ಪ್ರತಿಯೊಂದು ಊರಿನಲ್ಲಿಯೂ, ಪ್ರತಿಯೊಂದು ಗ್ರಾಮದಲ್ಲಿಯೂ ಒಂದು ಫಾರೆಸ್ಟ್ ಬೆಳೆಸುವ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಈಗ ನಮ್ಮ ಊರಿನಲ್ಲಿಯೂ ಸೌದೆ ಹೇರಳವಾಗಿ ಸಿಕ್ಕುವುದಿಲ್ಲ. ಆದ್ದರಿಂದ ಜನಗಳು ಸೌದೆಗಾಗಿ ಮಾವಿನ ಮರ, ಒಳ್ಳೊಳ್ಳೆಯ ಮರದ ಸೌದೆಯನ್ನು ಜುನಾಯಿಸಿ ತರುತ್ತಿದ್ದಾರೆ. ಇಂಥಾ ಪ್ರವೃತ್ತಿಯನ್ನು ಮೊಟಕು ಮಾಡಬೇಕೆಂದು ನಾನು ಹೇಳುತ್ತೇನೆ.

(ಶ್ರೀ ಕಾಗೋಡು ತಿಮ್ಮಪ್ಪ)

ಫಾರೆಸ್ಟಿಗೆ ಸಂಬಂಧಪಟ್ಟಹಾಗೆ ಕೆಲವು ಹಗರಣಗಳು ನಡೆದಿವೆ, ಇದಕ್ಕೆ ಸಂಬಂಧಪಟ್ಟ ಹಾಗೆ ಹೊಸನಗರದ ಒಂದು ಫಾ ಸ್ಟ್ ಹಗರಣವನ್ನು ವಿಜಿಲೆನ್ಸ್ ಕಮಿಷನ್ನಿಗೆ ಕಳುಹಿಸಿದ್ದಾರೆ. ಅದರ ವಿಚಾರಣೆ ಮಾಡಿ ಆ ಬಗ್ಗೆ ಏನು ಕಾರ್ಯಕ್ರಮ ಕೈಗೊಂಡಿದ್ದಾರೆ ಎಂಬುದು ಗೊತ್ತಾಗುವುದಿಲ್ಲ. ಗಂಧದ ಮರಗಳ ಕೇಸಿಗೆ ಸಂಬಂಧಪಟ್ಟಹಾಗೆ ಅನೇಕರನ್ನು ಹಿಡಿದು ಅನೇಕರ ಮೇಲೆ ಕೇಸು ಹಾಕಿದ್ದಾರೆ. ಅವುಗಳನ್ನು ವಿಜಿಲೆನ್ಸ್ ಕಮಿಷನ್ನಿಗೆ ಕಳುಹಿಸಿ ವಿಚಾರಣೆ ನಡೆಸಿ ತಪ್ಪಿತಸ್ಥರಿಗೆ ಏನು ಶಿಕ್ಷೆಯನ್ನು ವಿಧಿಸಬೇಕೋ ಅದನ್ನು ವಿಧಿಸಬೇಕು. ಆ ಬಗ್ಗೆ ಏನು ಮಾಡಿದ್ದಾರೆ ಎಂಬುದು ಇದುವರೆಗೂ ಗೊತ್ತಿಲ್ಲ. ವಿಜಿಲೆನ್ಸ್ ಕಮಿಷನ್ನಿಗೆ ಕಳುಹಿಸಿದ ಕೇಸಿನ ಸಂಬಂಧದಲ್ಲಿ 6 ತಿಂಗಳಲ್ಲಿ ಯಾವುದಾದರೂ ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕು. ಇದೇ ಹೋದರೆ ಅಪರಾಧಿಗಳು ಯಾರು ನಿರಪರಾಧಿಗಳು ಯಾರು ಎಂಬುದು ಗೊತ್ತಾಗುವುದಿಲ್ಲ. ಸಾರ್ವಜನಿಕರಿಗೆ ಆ ಕೇಸುಗಳು ಏನಾದರೂ ಅವುಗಳನ್ನೇನಾದರೂ ನಡೆಸಿದವರು ಮುಚ್ಚಿಹಾಕಿದರೆ ಏನನ್ನುವ ಅನುಮಾನ ಬರುತ್ತದೆ. ಆದ್ದರಿಂದ ಅವುಗಳ ಬಗ್ಗೆ ಬೇಗ ತೀರ್ಮಾನ ತೆಗೆದುಕೊಳ್ಳಬೇಕು. ವಿಜಿಲೆನ್ಸ್ ಕಮಿಷನ್ನಿಗೆ ಕಳುಹಿಸಿರತಕ್ಕ ಕೇಸುಗಳನ್ನು ಬೇಗ ತರಿಸಿಕೊಂಡು ತಪ್ಪಿತಸ್ಥರಿಗೆ ತಕ್ಷಣ ಶಿಕ್ಷೆಯನ್ನು ವಿಧಿಸುವುದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಬದ್ರಾವತಿ ಕಾರ್ಖಾನೆಗೆ ಇದ್ದಿಲಗೋಸ್ಕರ ಪ್ರತಿವರ್ಷವೂ ಕೂಡ 7 ಸಾವಿರ ಎಕರೆ ಅರಣ್ಯ ಬೇಕಾಗುತ್ತದೆ ಎಂದು ಮಾನ್ಯ ಮಂತ್ರಿಗಳು ನನ್ನ ಒಂದು ಪ್ರಶ್ನೆಗೆ ಉತ್ತರವಾಗಿ ಬರೆದಿದ್ದಾರೆ; ಹಿಂದೆ ಸುಮಾರು ಎಂ. ವಿಶ್ವೇಶ್ವರಯ್ಯನವರು ಕೂಡ ಈ ಇದ್ದಿಲ್ಲನ್ನೇ ನಂಬಿಕೊಂಡು ಆ ಕಾರ್ಖಾನೆಯನ್ನು ನಡೆಸುವುದು ಯೋಗ್ಯವಲ್ಲ ಬೇರೆ ಏನಾದರೂ ಪರ್ಯಾಯ ಯೋಜನೆಯನ್ನು ಕಂಡುಹಿಡಿಯಬೇಕು ಎಂದು ಹೇಳಿದ್ದಾರೆ. ಆದ್ದರಿಂದ ಇವೊತ್ತು ಅವರು ಹೇಳಿದಂತಹ ಮಾತನ್ನು ನೆನಪಿಗೆ ತಂದು ಕೊಂಡು ಕಬ್ಬಿಣದ ಕಾರ್ಖಾನೆಗೆ ಇದ್ದಿಲನ್ನು ಒದಗಿಸಬೇಕಾದರೆ ಇರತಕ್ಕ ಕಾಡನ್ನೇ ಅವಲಂಬಿಸುವುದಕ್ಕಿಂತ ಪ್ರತ್ಯೇಕವಾಗಿ ಬೇರೆ ಎರಡಕ್ಕಿಂತಾ ಹೆಚ್ಚಿನ ಅವಕಾಶಗಳನ್ನು ಕೊಡಬೇಕು. ಆಗ ಅಲ್ಲಿ ಸುಮಾರು 500 ಜನಗಳಿಗೆ ಕೆಲಸ ಸಿಗುತ್ತದೆ. ಆಗ ಅಲ್ಲಿ ಹೆಚ್ಚಿಗೆ ಅರಣ್ಯ ಪ್ರದೇಶವನ್ನು ರಕ್ಷಣೆ ಮಾಡಿಕೊಳ್ಳುವ ಆಶೆ ಆಕಾಂಕ್ಷೆ ಉಂಟಾಗುತ್ತದೆ. ಆದ್ದರಿಂದ ಇವರಡನ್ನೂ ಒಂದೇ ಕಾರ್ಪೊರೇಷನ್ನಿಗೆ ಅಂದರೆ ಒಬ್ಬರಿಗೇ ಈ ಜವಾಬ್ದಾರಿಯನ್ನು ವಹಿಸಬೇಕು. ಇನ್ನು ಮೈದು ಮರಗಳನ್ನು ಕೊಡುವ ಕೆಲಸದಲ್ಲಿ ಲಾಪ್ಸ್ ಅಂಡ್ ಟಾಪ್ಸ್‌ಗಳನ್ನು ಒಂದು ದೊಡ ಕಂಪೆನಿಗೆ ಕೊಡಬೇಕೆಂದು ಕೇಳಿದ್ದಾರೆ. ಅದನ್ನು ಉಪಯೋಗಿಸಿಕೊಂಡು ಸಣ್ಣ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಮೈದು ಮರಗಳನ್ನು ಯಾವ ತಾಲ್ಲೂಕುಗಳಲ್ಲಿ ಕತ್ತರಿಸಿ ಸಂಗ್ರಹ ಮಾಡುತ್ತಾರೋ ಅಂತಹ ಪ್ರದೇಶಗಳಲ್ಲಿ ಲಾಪ್ಸ್ ಅಂಡ್ ಟಾಪ್ಸ್ ಉಪಯೋಗಿಸಿಕೊಂಡು ಸಣ್ಣ ಕಾರ್ಖಾನೆಯನ್ನು ಸ್ಥಾಪನೆಮಾಡಬಹುದು ಸ್ಲೇಟ್ ಪೆನ್ಸಿಲ್, ಬೆಂಕಿ ಕಡ್ಡಿ, ಬೆಂಕಿ ಪೊಟ್ಟಣ, ಪ್ಯಾಕಿಂಗ್ ಕೇಸ್ ಇವೆಲ್ಲವನ್ನೂ ಮಾಡಬಹುದು. ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಲಾಪ್ಸ್ ಅಂಡ್ ಟಾಪ್ಸ್ ಉಪಯೋಗಿಸಿಕೊಂಡು ಸಣ್ಣ ಮರದ ಕೈಗಾರಿಕೆಗಳನ್ನು ನಿಮ್ಮ ಇಂಡಸ್ಟ್ರೀಸ್ ಕಾರ್ಪೊರೇಷನ್ನಿನವರು ಮಾಡಬಹುದು. ಜೊತೆಗೆ ನೀಲಗಿರಿ ಮರಗಳನ್ನು ಹರಿಹರ ಪಾಲ ಪೇಪರ್ಸ್ ಕಂಪೆನಿಯವರಿಗೆ ಕೊಟ್ಟಿದೆ. ದರ ಬಹಳ ಕಡಿಮೆಯಾಗಿದೆ ಅದನ್ನು ಮಾನ್ಯ ಮುಖ್ಯ ಮಂತ್ರಿಗಳು ಪರಿಶೀಲನೆಮಾಡಬೇಕು. ಇದರಲ್ಲಿ ಕಾನೂನು ಅಡಚಣೆ ಬರುತ್ತದೆಂದು

11-30 A.M.

ಪ್ರತಿ ವರ್ಷ 7 ಸಾವಿರ ಎಕರೆ ಪ್ರದೇಶದಲ್ಲಿ ಕಾಡನ್ನು ಕಡಿದು ಸಾಲೆ ಒದಗಿಸುವ ಕ್ರಮವನ್ನು ತಪ್ಪಿಸಬೇಕು. ಜೊತೆಗೆ ಪ್ಲಾಂಟೇಷನ್ಸ್ ಮತ್ತು ಇಂಡಸ್ಟ್ರೀಸಿಗೆ ಎರಡು ಕಾರ್ಪೊರೇಷನ್‌ಗಳನ್ನು ಮಾಡಿದ್ದಾರೆ ಅದು ನನಗೆ ಅರ್ಥವಾಗುತ್ತಾ ಇಲ್ಲ. ಕೆಲಸದ ಭರದಿಂದ ಎರಡನ್ನೂ ಒಟ್ಟಿಗೆ ಮಾಡಿದರೆ ಒಳ್ಳೆಯದು. ಒಂದುಕಡೆ ಅರಣ್ಯವನ್ನು ಬೆಳೆಸುವುದು, ಬೆಳೆಸಿದಂಥ ಅರಣ್ಯ ಸಂಪತ್ತಿನಿಂದ ಕೈಗಾರಿಕೆಗಳನ್ನು ಸ್ಥಾಪಿಸುವುದು. ಇವೆರಡರ ಸಂಬಂಧಕ್ಕೂ ಒಂದೇ ಕಾರ್ಪೊರೇಷನ್ ಮಾಡಿದರೆ ಖಂಡಿತವಾಗಿ ಕೆಲಸ ಸುಲಭವಾಗುತ್ತದೆ. ಯಾವ ತಾಲ್ಲೂಕಿನಲ್ಲಿ ಉತ್ತಮವಾಗಿ 10 ಸಾವಿರ ಎಕರೆಗಳಷ್ಟು ಬೆಳೆಸುತ್ತಾರೆ ಆ ತಾಲ್ಲೂಕಿಗೆ ಹೆಚ್ಚಿನ ಅವಕಾಶಗಳನ್ನು ಕೊಡಬೇಕು. ಆಗ ಅಲ್ಲಿ ಸುಮಾರು 500 ಜನಗಳಿಗೆ ಕೆಲಸ ಸಿಗುತ್ತದೆ. ಆಗ ಅಲ್ಲಿ ಹೆಚ್ಚಿಗೆ ಅರಣ್ಯ ಪ್ರದೇಶವನ್ನು ರಕ್ಷಣೆ ಮಾಡಿಕೊಳ್ಳುವ ಆಶೆ ಆಕಾಂಕ್ಷೆ ಉಂಟಾಗುತ್ತದೆ. ಆದ್ದರಿಂದ ಇವರಡನ್ನೂ ಒಂದೇ ಕಾರ್ಪೊರೇಷನ್ನಿಗೆ ಅಂದರೆ ಒಬ್ಬರಿಗೇ ಈ ಜವಾಬ್ದಾರಿಯನ್ನು ವಹಿಸಬೇಕು. ಇನ್ನು ಮೈದು ಮರಗಳನ್ನು ಕೊಡುವ ಕೆಲಸದಲ್ಲಿ ಲಾಪ್ಸ್ ಅಂಡ್ ಟಾಪ್ಸ್‌ಗಳನ್ನು ಒಂದು ದೊಡ ಕಂಪೆನಿಗೆ ಕೊಡಬೇಕೆಂದು ಕೇಳಿದ್ದಾರೆ. ಅದನ್ನು ಉಪಯೋಗಿಸಿಕೊಂಡು ಸಣ್ಣ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಮೈದು ಮರಗಳನ್ನು ಯಾವ ತಾಲ್ಲೂಕುಗಳಲ್ಲಿ ಕತ್ತರಿಸಿ ಸಂಗ್ರಹ ಮಾಡುತ್ತಾರೋ ಅಂತಹ ಪ್ರದೇಶಗಳಲ್ಲಿ ಲಾಪ್ಸ್ ಅಂಡ್ ಟಾಪ್ಸ್ ಉಪಯೋಗಿಸಿಕೊಂಡು ಸಣ್ಣ ಕಾರ್ಖಾನೆಯನ್ನು ಸ್ಥಾಪನೆಮಾಡಬಹುದು ಸ್ಲೇಟ್ ಪೆನ್ಸಿಲ್, ಬೆಂಕಿ ಕಡ್ಡಿ, ಬೆಂಕಿ ಪೊಟ್ಟಣ, ಪ್ಯಾಕಿಂಗ್ ಕೇಸ್ ಇವೆಲ್ಲವನ್ನೂ ಮಾಡಬಹುದು. ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಲಾಪ್ಸ್ ಅಂಡ್ ಟಾಪ್ಸ್ ಉಪಯೋಗಿಸಿಕೊಂಡು ಸಣ್ಣ ಮರದ ಕೈಗಾರಿಕೆಗಳನ್ನು ನಿಮ್ಮ ಇಂಡಸ್ಟ್ರೀಸ್ ಕಾರ್ಪೊರೇಷನ್ನಿನವರು ಮಾಡಬಹುದು. ಜೊತೆಗೆ ನೀಲಗಿರಿ ಮರಗಳನ್ನು ಹರಿಹರ ಪಾಲ ಪೇಪರ್ಸ್ ಕಂಪೆನಿಯವರಿಗೆ ಕೊಟ್ಟಿದೆ. ದರ ಬಹಳ ಕಡಿಮೆಯಾಗಿದೆ ಅದನ್ನು ಮಾನ್ಯ ಮುಖ್ಯ ಮಂತ್ರಿಗಳು ಪರಿಶೀಲನೆಮಾಡಬೇಕು. ಇದರಲ್ಲಿ ಕಾನೂನು ಅಡಚಣೆ ಬರುತ್ತದೆಂದು